# ಹೋಲಿ

ಮೂಲ: **ದಯಾ ಪವಾರ್**
ಕನ್ನಡಕ್ಕೆ: **ದೇವನೂರು ಮಹಾದೇವ**

ಹೋದ ದೀಪಾವಳಿಲಿ ಎಲ್ಲೆಲ್ಲೂ ಹಬ್ಬದ ಸಿಹಿ ತುಂಬಿದ್ದಾಗ ಹಬ್ಬಕ್ಕೆ ನನ್ನ ಹೆಂಡತಿಯೂ ಒಬ್ಬಟ್ಟು ಮಾಡಿದ್ದಳು. ಯಾಕೆಂದರೆ ಅಕ್ಕಪಕ್ಕದ ಮಕ್ಕಳು ಸಿಹಿತಿಂದು ನಲಿದಾಗ ನಮ್ಮ ಮಕ್ಕಳು ಕಣ್ಣು ಬಾಯಿ ಬಿಡಬಾರದು ಅಂತ. ಒಬ್ಬಟ್ಟಿನ ಜೊತೆಗೇ ಲಾಡು ಖಾರಸೇವೆಯನ್ನೂ ಮಾಡಿದ್ದಳು. ನಾನು ಆಗಷ್ಟೇ ತಿನ್ನುವುದು ಮುಗಿಸಿ ಕುಂತಿದ್ದೆ. ತಿಂದಾಗ ಮೇಲಿನ ಸಿಹಿ ಇನ್ನೂ ಬಾಯಲ್ಲಿತ್ತು. ಕೈಯಲ್ಲಿ ಮರಾಠಿ ದೀಪಾವಳಿ ವಿಶೇಷ ಸಂಚಿಕೆ ಇತ್ತು. ಹೊರಗೆ ದೀಪಾವಳಿಯ ಗಲಗು ಗದ್ದಲ ಬಾಣ ಬಿರುಸು ಇದ್ದಾಗ್ಯೂ ನಾನು ದಲಿತ ಸಾಹಿತ್ಯದ ಬಗ್ಗೆ ಮರಾಠಿ ಖ್ಯಾತ ಲೇಖಕ ಜಯವಂತದಾಳ್ವೆ ಬರೆದಿದ್ದ ಲೇಖನದಲ್ಲಿ ತಲ್ಲೀನನಾಗಿದ್ದೆ.

ಇತ್ತೀಚೆಗೆ ಅಂದರೆ ನಾಲ್ಕೈದು ವರ್ಷಗಳಾಚೆಗೆ ಮರಾಠಿ ಲೇಖಕರು ದಲಿತ ಸಾಹಿತ್ಯವನ್ನು ನೋಡುತ್ತಿದ್ದ ನೋಟ ಕಣ್ಣೆದುರು ಬಂತು. ಕೊಳೆತು ನಾರೋ ಸತ್ತ ಇಲೀನ ಎಸೆಯೋ ಕಸದ ಬುಟ್ಟಿ ಜಾಗದಲ್ಲಿ ದಲಿತ ಸಾಹಿತ್ಯವನ್ನಿರಿಸಿದ್ದರು. ಇಂದು ದಲಿತ ಸಾಹಿತ್ಯ ತನ್ನ ಕಾಲ ಮೇಲೆ ತಾನು ನಿಂತಿದೆ. ಇದು ನಂಗಂತು ತುಂಬ ಸಮಾಧಾನ ತಂದು ಕೊಟ್ಟಿದೆ. ದಾಳ್ವೆಯವರು ತಮ್ಮ ಲೇಖನದ ಮೊದಲು ದಲಿತ ಸಾಹಿತ್ಯದ ಕಲಾತ್ಮಕ ಮೌಲ್ಯವನ್ನು ಚರ್ಚಿಸಿದ್ದರು. ಅಲ್ಲಿ ಅವರು – ಮೇಲ್ಜಾತಿ ಲೇಖಕನೂ ಕೂಡ ಸಮರ್ಥ ಕಲ್ಪನೆ ಹಾಗೂ ಗ್ರಹಣ ಶಕ್ತಿಯಿಂದ ದಲಿತನ ಅನುಭವವನ್ನು ಚಿತ್ರಿಸಬಹುದು – ಎಂದು ವಾದಿಸಿದ್ದರು. ಈ ವಾದವನ್ನು ಎತ್ತಿ ನಿಲ್ಲಿಸಲು "ಬಾಂಬೆ ಅಂಥ ಸಿಟಿಗಳಲ್ಲಿ" ಎಂದು ದಾಳ್ವೆ ಬರೆಯುತ್ತ – "ಪವಾರ್‌ನಂಥ ಲೇಖಕರು ಮತ್ತು ನಾನು ಒಂದೇ ಬಿಲ್ಡಿಂಗಿನಲ್ಲಿ ವಾಸಿಸುತ್ತಿದ್ದೇವೆ. ಇಂಥ ಸ್ಥಿತಿ ಏರ್ಪಟ್ಟಿರುವಾಗ ನಾವು ಒಂದೇ ರೀತೀಲಿ ಬದುಕುತ್ತಿದ್ದೇವೆ. ಹಾಗಾಗಿ ನಮ್ಮ ಅನುಭವಗಳು ಕೂಡ ಒಂದೇ ಬಗೆಯವಾಗಿರುತ್ತವೆ" – ಎಂದು ಮುಂದುವರಿಸಿದ್ದರು. ಅವರ ಲೇಖನದ ಈ ಸಾಲುಗಳು ನನ್ನನ್ನು ತಡೆದು ಅಲ್ಲೇ ನಿಲ್ಲಿಸಿದುವು:

ಶ್ರೀ ದಾಳ್ವೆಯವರ ಹೇಳಿಕೆಯ ಗುಂಗಿನಲ್ಲಿದ್ದಾಗಲೇ ಅತ್ತ ರೂಮಿಂದ ನನ್ನ ಹೆಂಡತಿಯ ಜೋರು ಕಿರುಚಾಟ ಕಿವಿಗೆ ಬಿತ್ತು. ಅವಳು ರೇಗು ದನಿಯಲ್ಲಿ "ಇದನ್ನು ಇಲ್ಲಿಂದ ತಗೊಂಡು ನಡೀರಿ ಮೊದ್ಲು. ನಾವೇನು ಬಿಕನಾಶಿಗಳು ಅಂತ ತಿಳಿದಿದ್ದೀರಾ ಹೇಗೆ?" ಎಂದದ್ದು ಕೇಳಿಸಿತು. ನಾನು ಒಳಕ್ಕೆ ಇಣುಕಿದೆ. ನನ್ನ ಹೆಂಡತಿ ಕೋಪ ತುಂಬಿಕೊಂಡು ಒದರುತ್ತಿದ್ದಳು. ಅವಳಿಗೆ ಎದುರಾಗಿ ನಮ್ಮ ನೆರಮನೆಯಾಕೆ ಶ್ರೀಮತಿ ದೇಶಮುಖ್ ನಿಂತಿದ್ದರು. ಆಕೆ ಮೈತುಂಬ ಪಡವೆ ವಸ್ತ್ರ ಧರಿಸಿ ಕೈಯಲ್ಲಿ ಸಿಹಿತಿಂಡಿ ತುಂಬಿದ ತಟ್ಟೆ ಹಿಡಿದು ನಿಂತಿದ್ದರು. ನಾನು ಇಲ್ಲಿಂದಲೆ "ಹೇ, ಏನ್ಸಮಚಾರ ಅದು? ಯಾಕೆ ಹಂಗೆ ರೇಗ್ತಾ ಇದ್ದಿ?" ಅಂದೆ. ಅಷ್ಟರಲ್ಲಿ ಶ್ರೀಮತಿ ದೇಶಮುಖ್ ಗೊಣಗುತ್ತ ನಮ್ಮ ಬಾಗಿಲು ತಡೆದು ಬಿರ್ರನೆ ಹೊರ ಹೋದರು. ಇದೇನು ಕಥೆಯಪ್ಪ ಅಂತ ನೋಡತೊಡಗಿದೆ. ನನ್ನ ಹೆಂಡತಿ ಕಣ್ಣೀರ ಕೋಡಿ ಹರಿಸುತ್ತಿದ್ದಳು. ಆಮೇಲೆ ಆ ಬೆಳಿಗ್ಗೆ ಆದುದನ್ನೆಲ್ಲ ವರದಿ ಒಪ್ಪಿಸಿದಳು.

ನಾವು ಇಲ್ಲಿಗೆ ಬಂದು ಎರಡು ತಿಂಗಳಾಗುತ್ತ ಬಂತು. ಸ್ಟೇಟ್ ಹೌಸಿಂಗ್ ಬೋರ್ಡಿನವರು ಈ ಕಾಸ್ಮೊಪಾಲಿಟನ್ ನೆರೆಹೊರೆ ಇರೋ ಜಾಗವನ್ನು ವಾಸಕ್ಕೆ ಕೊಟ್ಟು ನಾವು ಉಸಿರಾಡುವಂತೆ ಮಾಡಿದ್ದರು. ಕಳೆದ ಹತ್ತು ವರ್ಷಗಳಿಂದಲೂ ನಾವು ಅಲೆಮಾರಿಗಳಂತೆ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಟೆಂಟು ಎತ್ತುತ್ತ ಬಂದಿದ್ದೆವು. ಇಲ್ಲಿಗೆ ಬರೋ ಮುಂಚೆ ಮೋತಿಲಾಲ್ ನಗರದಲ್ಲಿದ್ದೆವು. ಅದಂತು ಹೊಲಗೇರಿಗೂ ಚೂರು ಅತ್ತತ್ತ ಅನ್ನುವಂತಿತ್ತು. ನಾವು ಇಲ್ಲಿಗೆ ಬಂದಾಗ ನನ್ನ ಹೆಂಡತಿ ಸಮಾಧಾನದ ಉಸಿರು ಬಿಟ್ಟಳು. ನಮ್ಮ ಈ ನೂತನ ನೆರೆಹೊರೆಯಿಂದಾಗಿ ನಮ್ಮ ಮಕ್ಕಳು ಕೀಳುಮಾತು ಕೀಳು ನಡೆ-ನುಡಿಗೆ ಬೀಳುವುದಿಲ್ಲ ಎಂಬುದು ಅವಳಾಸೆಯಾಗಿತ್ತು. ನಮ್ಮ ಒಂದು ಕಡೆ ಗುಜರಾತಿಯವರು. ಇನ್ನೊಂದು ಕಡೆ–

ಮರಾಠಿ, ದೋಬಿ, ಕ್ರಿಶ್ಚಿಯನ್ನ, ಬ್ರಾಹ್ಮಣರು ಹೀಗಿದ್ದರು. ಇದಷ್ಟೆ ಇಂಡಿಯಾದ ಜಾತಿ ಪ್ರಭುತ್ವದ ತುಣುಕಿನಂತಿತ್ತು. ನಮ್ಮಲ್ಲಿದ್ದ ಡಾ। ಅಂಬೇಡ್ಕರ್ ಫೊಟೊವೆ ನಮ್ಮ ಜಾತಿಯನ್ನು ಅಕ್ಕಪಕ್ಕದವರಿಗೆಲ್ಲ ತಂತಾನೆ ಅರ್ಥ ಮಾಡಿಸಿತ್ತು. ಅದನ್ನೇನು ಬಾಯಿಬಿಟ್ಟು ಹೇಳಬೇಕಾದ ಪ್ರಮೇಯವಿರಲಿಲ್ಲ. ಅಲ್ಲಿದ್ದ ನಾವೆಲ್ಲ ಮಧ್ಯಮ ವರ್ಗಕ್ಕೆ ಸೇರಿದವರು. ಇಂಥ ಕಡೆಯಲ್ಲೆಲ್ಲ ಮೇಲು ಕೀಳು ಇರುವುದಿಲ್ಲ ಎಂದು ಎಣಿಸಿದ್ದೆವು. ದೀಪಾವಳಿ ಪ್ರಯುಕ್ತ ಅಕ್ಕಪಕ್ಕದವರಲ್ಲಿ ಸಿಹಿತಿಂಡಿಗಳನ್ನು ಕೊಟ್ಟು ಈಸಿಕೊಳ್ಳುವುದು ನಡೆದಿತ್ತು. ಇದನ್ನು ನನ್ನ ಹೆಂಡತಿ ಬೆಳಗಿನಿಂದಲೂ ಗಮನಿಸುತ್ತಿದ್ದು ಅವರಂತೆಯೇ ಇವಳೂ ಸಿಹಿ ತಕ್ಕೊಂಡು ದೇಶಮುಖ್ ಮನೆಗೆ ಹೋದಳು. ಈ ದೇಶಮುಖ್‌ರು ಮರಾಠಿಗರಲ್ಲೆಲ್ಲ ಶಿಕ್ಷಣ ಪಡೆದವರು, ತಾವೇ ನವನಾಗರೀಕತೆಯನ್ನು ಪ್ರತಿನಿಧಿಸುವವರು ಎಂದು ಮೆರೆಯುವಂಥ ಜನರು.

ವಾಗ ನಾನು ಕಗ್ಗತ್ತಲಲ್ಲಿ ಇದ್ದಂತೆನಿಸಿತು. ಆ ಕ್ಷಣದಲ್ಲಿ ಇಂಡಿಯಾ ಒಂದು ಭವ್ಯ ಪಿರಮಿಡ್ಡಿನ ಥರವೂ, ಅಲ್ಲಿ ನಾನು ಮತ್ತು ನನ್ನಂಥವರು ಪಿರಮಿಡ್ಡಿನೊಳಗೆ ಹುದುಗಿಟ್ಟ ಸತ್ತ ಹೆಣಗಳ ಥರವೂ ಕಾಣತೊಡಗಿತು. ಹಾಸಿಗೇಲಿ ವೈಚೆಲ್ಲಿ ಯೋಚಿಸುತ್ತ ಹೋದೆ. ಒಂದೇ ಬಿಲ್ಡಿಂಗಿನಲ್ಲಿ ವಾಸಿಸುತ್ತಿದ್ದರೂ ಜಯಂತ ದಾಲ್ವೆ ಅಂಥವರಿಗೆ ಇಂಥ ಅನುಭವಗಳು ಆಗುವುವೆ? ಎಂಬ ಪ್ರಶ್ನೆ ಬಂತು. ದಾಲ್ವೆ ಅಂಥವರಿಗೆ ಅಸ್ಪೃಶ್ಯತೆಯು ಸಮಾಜಕ್ಕೆ ಅಂಟಿದ ಕೊಳೆಯಂತೆ ಕಾಣುತ್ತದೆ. ಆದರೆ ಅದೇ ನಮಗೆ ಅವ್ವನ ಹೊಟ್ಟೆ ಒಳಗಿಂದ ಹೊರಬೀಳುವಾಗಲೇ ಒತ್ತಿದ ಠಸ್ಸೆಯಾಗಿದೆ. ಇದಕ್ಕೆ ಕೊನೆ ಹೇಗೆ? ಇದು ಅನಾದಿ ಕಾಲದಿಂದಲೂ ಚರಂಡಿ ನೀರಿನಂತೆ ಹರಿದು ಬಂದಿದೆ. ಇಂದು ಅಸ್ಪೃಶ್ಯತೆ ತೊಲಗಿಸಲು ಕಾನೂನುಗೀನೂನುಗಳೆಲ್ಲ ಬಂದಿವೆ. ಆದರೆ ಆಗುತ್ತಿರುವುದನ್ನು ಕಂಡಾಗ ಜಾತಿ ಶಾಸನದ

## ಕ್ಲಾಸಿನಲ್ಲಿ 'ಚೂಟಿ ಹುಡುಗ, ಪ್ರತಿಭಾವಂತ'ನಾದರೂ ಊಟದ ಹೊತ್ತು ಬಂದಾಗ ಪಂಕ್ತಿ ಬೇರೆ!

ನಮ್ಮ ಮನೆಯ ತಿಂಡಿಯನ್ನು ಒಪ್ಪಿಸಿಕೊಳ್ಳಲು ಶ್ರೀಮತಿ ದೇಶಮುಖ್ ಹಿಂದೇಟು ಹಾಕಿದರು. ಆಕೆ ಹೇಳಿದಂತೆ–" ಯಾಕೆ ಇದನ್ನೆಲ್ಲ ತಂದಿರಿ ನೀವು? ನಮ್ಮಲ್ಲೆ ತಿಂದು ಮಿಗುವಷ್ಟು ಇದೆ. ನಿಮ್ಮ ಮಕ್ಕಳೇ ಚೆನ್ನಾಗಿ ತಿನ್ಲಿ, ತಗೊಂಡು ಹೋಗಿ ಕೊಡಿ" ಎಂದೆಲ್ಲ ಬಾಯುಪಚಾರ ಮಾಡಿ ಹಿಂತಿರುಗಿಸಿದ್ದರು. ಆ ಉಪಚಾರದಲ್ಲು ದೊಡ್ಡಸ್ತಿಕೆಯ ಸೋಗಿತ್ತು. ಈ ಅವಮಾನ ನುಂಗಲು ಆಗದೆ ನನ್ನ ಹೆಂಡತಿ ಆಗಲಿಂದಲೂ ದುಮುಗುಡುತ್ತಿದ್ದಳು. ಇದಕ್ಕೆ ಮುಯ್ಯಿ ತೀರಿಸಿಕೊಳ್ಳಲು ಮನಸ್ಸಲ್ಲೆ ಅಂದಾಜು ಹಾಕುತ್ತಿದ್ದಳು. ಅದಕ್ಕೇ ಮುಖ ಮೋರೆ ನೋಡದೆ ಶ್ರೀಮತಿ ದೇಶಮುಖ್‌ರ ತಿಂಡಿಯನ್ನು ಅವರೇ ಒಯ್ಯುವಂತೆ ಇವಳೂ ಮಾಡಿದ್ದಳು. ಇದರಿಂದಾಗಿ ಬ್ರಾಹ್ಮಣ್ಯದ ತಿಂಡಿತೀರ್ಥ ಎಂದು ಬೀಗುತ್ತ ತಂದಿದ್ದ ಶ್ರೀಮತಿ ದೇಶಮುಖ್‌ರ ಪ್ರತಿಷ್ಠೆಗೆ ಬಹಳವೇ ಏಟು ಬಿತ್ತು.

ಇದೆಲ್ಲ ನನ್ನನ್ನು ಮೂಕನನ್ನಾಗಿಸಿತು. ತಿಂದಿದ್ದ ಸಿಹಿಯು ವಾಕರಿಕೆ ಬರಿಸತೊಡಗಿತು. ಇಡೀ ಪ್ರಪಂಚವೇ ದೀಪದ ಹಬ್ಬದಿಂದ ಝಗಝಗಿಸುತ್ತಿರು

ಹಿಡಿತವೇ ಬಿಗಿಯಾಗಿದೆ. ಶ್ರೀಮತಿ ದೇಶಮುಖ್‌ರ ಪ್ರಕರಣಕ್ಕೆ ಹೇಗೆ ಕಂಪ್ಲೇಂಟು ಕೊಡಬಹುದು? ಕಾನೂನು ದಾಖಲು ಮುಂದಿಡಲು ಕೇಳುತ್ತದೆ. ಅದನ್ನು ಎಲ್ಲಿಂದ ತರುವುದು? ಅಲ್ಲೊಬ್ಬ ಇಲ್ಲೊಬ್ಬ ಇರಬಹುದಾದ ಹಣವಂತ ಹರಿಜನನೂ ಇದರಿಂದ ತಪ್ಪಿಸಿಕೊಂಡಿಲ್ಲ. ನಗರಗಳಲ್ಲೆ ಹೀಗಿದ್ದರೆ ಇನ್ನು ಹಳ್ಳಿಗಳಲ್ಲಿ ನರಕವೇ ಸರಿ.

ನನ್ನ ಭೂತಕಾಲದ ಕೀವು ತುಂಬಿಕೊಂಡ ವ್ರಣಗಳು ಒಂದಾದಮೇಲೊಂದರಂತೆ ಒಡೆಯತೊಡಗಿದುವು. ನನ್ನ ಬಾಲ್ಯದ ಮಸುಕು ನೆನಪುಗಳು ಸಿನಿಮಾದಂತೆ ಕಣ್ಣೆದುರು ನಡೆಯತೊಡಗಿದುವು. ನಮ್ಮ ಹಟ್ಟಿ ಬೆಟ್ಟದ ತಪ್ಪಲಿನಲ್ಲಿತ್ತು. ಸಹ್ಯಾದ್ರಿಯ ಒಂದು ತುದಿ ನಮ್ಮ ತಾಲೂಕಿನ ವರೆಗೂ ಚಾಚಿದೆ. ಪ್ರವರಾ ನದಿಯು ನಮ್ಮೂರ ಪಕ್ಕದಲ್ಲೆ ಹರಿದು ಹೋಗುತ್ತದೆ. ಆ ಸುತ್ತಲಲ್ಲೆ ಆಕಾಶಕ್ಕೆ ಮುಖಹಾಕಿ ಕಲ್ಸೂಬಾಯಿ ಪರ್ವತ ನಿಂತಿದೆ. ಈ ಪ್ರಕೃತಿ ನಮ್ಮನ್ನು ಯಾವ ರೀತಿಯೂ ಮುಟ್ಟಿಲ್ಲ. ಮರಾಠೀಲಿ ಒಂದು ಗಾದೆ ಇದೆ– ಊರು ಇದ್ದಲ್ಲಿ ಒಂದು ಮಹರ್‌ವಾಡ ಅಂತ. ಹಾಗೇನೆ ನಮ್ಮ ಊರಲ್ಲೂ

ಒಂದು ಮಹರ್‌ವಾಡ.

ಮರಾಠಿ ಲೇಖಕರಲ್ಲಿ ಅನೇಕರು ತಮ್ಮ ಬಾಲ್ಯವನ್ನು ತಮ್ಮ ಕಥೆ ಕವನಗಳಲ್ಲಿ ತಂದಿರುವರು. ಆದರೆ ನಂಗೊ, ನನ್ನ ಬಾಲ್ಯ ನೆನೆಸಿಕೊಂಡರೇ ಜೀವ ಹಿಂಡಿದಂತಾಗುತ್ತದೆ. ಆದರೂ ನನ್ನ ಬಾಲ್ಯದೊಳಗೂ ಒಂದು ನವಿರೇಳಿಸುವ ಘಟನೆಯೂ ಹುದುಗಿದೆ. ಕ್ರಾಂತಿಕಾರಕ ಹಾಡುಗಾರರು ನಮ್ಮ ಕೇರಿಗೆ ಬಂದಿದ್ದನ್ನು ಎಂದೂ ಮರೆಯಲಾರೆ. ಇವರು ಆಗ ಡಾ। ಅಂಬೇಡ್ಕರರ ಸಂದೇಶವನ್ನು ಊರಿಂದೂರಿಗೆ ಹರಡುತ್ತಿದ್ದರು. "ಮಹರರ ಮಗನೇ ಚಾಲೂಕಿನವನು, ಸುಂದರನು" ಎಂಬಂಥ ಪದಗಳನ್ನೆಲ್ಲ ಹಾಡಿ ಮಹರರಲ್ಲಿ ಸ್ವಾಭಿಮಾನ ಮೂಡಿಸುತ್ತಿದ್ದರು. ಇದು ಸಮರಾತ್ರಿಯಾದ ಮೇಲೆ ಲಾಟೀನು ಬೆಳಕಲ್ಲಿ ಜರಗುತ್ತಿತ್ತು. ಇಂಥವರನ್ನು 'ಜಲ್ಸಾ'ದವರು ಎನ್ನುತ್ತಿದ್ದರು. ಈ 'ಜಲ್ಸಾ' ಮೇಲ್ಜಾತಿಯವರಲ್ಲೂ ಕುತೂಹಲ ಕೆರಳಿಸಿತ್ತು. ಅದಕ್ಕಾಗೆ ಅವರೂ ನೋಡಲು ನಮ್ಮ ಕೇರಿಗೂ ಬಂದಿದ್ದರು. ಅವರಿಗಾಗಿ ಎಂದು ಪ್ರತ್ಯೇಕ ಸ್ಥಳ ಏರ್ಪಡಿಸಿತ್ತು. ಜಲ್ಸಾವು ತಮ್ಮಟೆ ದನಿ ಜೊತೆಗೆ ತಂತಿವಾದ್ಯದ ಅಡ್ಡಾದಿಡ್ಡಿ ಟುಯ್‌ಟುಯ್‌ನೊಡನೆ ಸುರುವಾಗುತ್ತಿತ್ತು. ಮರಾಠಿಗರ 'ತಮಾಷ'ದಂತೆಯೇ ಜಲ್ಸಾದಲ್ಲಿ ಗೊಲ್ಲತಿಯರ ಪ್ರವೇಶದೊಡನೇ ಆರಂಭವಿತ್ತು. 'ತಮಾಷ'ದಲ್ಲಾದರೆ ಗೊಲ್ಲತಿಯರು ಮದುರಾ ದಿಕ್ಕಿಗೆ ಹೋಗುವ ದೃಶ್ಯವಿತ್ತು. ಇದನ್ನೆ ಜಲ್ಸಾ ತನಗೆ ತಕ್ಕಂತೆ ಬದಲಾವಣೆ ಮಾಡಿಕೊಂಡಿತ್ತು. ಇಲ್ಲಿ ಗೊಲ್ಲತಿಯರು ಅಸ್ಪೃಶ್ಯರಿಗೆ ಪ್ರವೇಶವಿಲ್ಲದ ಕಲಾರಾಮ ದೇವಸ್ಥಾನದ ಕಡೆಗೆ ನಡೆವರು. ಇದ ಕಂಡ ಪೂಜಾರಿ ತಡೆವನು. ಇದನ್ನು ಪ್ರತಿಭಟಿಸಿ ಗೊಲ್ಲತಿಯರು ಮುಂದುವರೆಯುವರು – ಈ ಸನ್ನಿವೇಶದಲ್ಲಿ ಜಲ್ಸಾ ನೋಡಲು ಬಂದಿದ್ದ ಮೇಲ್ಜಾತಿಯವರ ತಲೆ ಒಳಗೆ ಬೇರೊಂದು ನಾಟಕವೆ ಆಗುತ್ತಿತ್ತು. ಅವರು ಒಂದು ಬಗೆಯ ಮೋಡಿಗೆ ಒಳಗಾಗಿದ್ದರು. ಗೊಲ್ಲತಿಯರು ದೇವಸ್ಥಾನಕ್ಕೆ ನುಗ್ಗಿ ದೇವರನ್ನು ಹೊಲೆ ಮಾಡಬಹುದೆಂದು ಅವರ ಜೀವ ಹಾರುತ್ತಿತ್ತು. ಕಡೆಗೆ ತಡೆಯಲಾರದ ಪಟೇಲರು ಎದ್ದು ನಿಂತು ಮೀಸೆ ತೀಡುತ್ತ ಹೆಮ್ಮಿನಿಂದ "ನಿಲ್ಸರೊ ತಮಾಷನ" ಎಂದು ಗರ್ಜಿಸಿದರು. ಇದಕ್ಕೆ ಪ್ರತಿಯಾಗಿ ನಮ್ಮಲ್ಲೆಲ್ಲ ಕಡಿದಾದ ಜಾವಾಜಿ ಎದ್ದುನಿಂತು "ಇದು ಜಲ್ಸಾ ಸ್ವಾಮಿ. ತಮಾಷೆ ಅಲ್ಲ" ಅಂದನು. ಜಲ್ಸಾ ಮುಂದುವರಿಯುತ್ತಲೆ ಇತ್ತು. ತಡಬಡಿಸುತ್ತ ಮೇಲುಜಾತಿಯವರೆಲ್ಲ ಒಟ್ಟಾಗಿ "ಆ ಗೊಲ್ಲತೀರ ನಿಲ್ಸಿ. ಅವರೇನು ಮುಂದೆಹೋದ್ರೆ ನಮ್ಮ ದೇವರು ಜಾತಿಕೆಡ್ತಾನೆ" ಎಂದು ಕೂಗಿದರು. ಪರಿಸ್ಥಿತಿ ಬಿಗಡಾಯಿಸುತ್ತ ಹೊಡೆದಾಟದಿಂದ ಕೊನೆಯಾಗಬಹುದೇನೋ ಅನ್ನಿಸಿತು. "ಇದು ನಮ್ಮಕೇರಿ ಸ್ವಾಮಿ. ನೀವು ನೋಡಂಗಿದ್ದರ ನೋಡಬಹುದು. ಇಲ್ಲಾಂದ್ರ ಹೋಗಬಹುದು" ಎಂದು ಗಟ್ಟಿಯಾಗೆ ಅಂದನು. ಜಾವಾಜಿಯ ಈ ನುಡಿಗಳು ಮೇಲ್ಜಾತಿಯವರ ಮುಖಕ್ಕೇ ಹೊಡೆದಂತಾಯ್ತು. ಅವರೆಲ್ಲ ಎದ್ದವರೆ ದಡಬಡ ಹೋದರು. ಆಮೇಲೆ ಜಲ್ಸಾ ಏನೂ ನಡೆಯಲಿಲ್ಲ ಎಂಬಂತೆ ಮುಂದುವರಿಯಿತು.

ಮಾರನೆಯ ದಿನ ಜಲ್ಸಾದವರು ಊರು ಬಿಟ್ಟ ಮೇಲೆ ರಾತ್ರಿಯ ಬೆಂಕಿ ಭುಗಿಲ್ಲೆಂದಿತು. ಮೇಲುಜಾತಿಯವರೆಲ್ಲ ಸೇರಿ ಮಸಲತ್ತು ನಡೆಸಿ ಮಹರವಾಡಕ್ಕೆ ಕಟ್ಟು ಮಾಡಿದರು. ನಮಗೆಲ್ಲ ಊರೊಳಕ್ಕೆ ಪ್ರವೇಶವಿಲ್ಲದಂತಾಯ್ತು. ಜೀತದವರೆಲ್ಲ ಕೆಲ್ಸ ಕಳೆದುಕೊಂಡರು. ನಮ್ಮ ದಾರಿ ಮುಚ್ಚಿ ಮುಳ್ಳು ಬೇಲಿ ಹಾಕಿ ನಾವು ಸುತ್ತು ಬಳಸಿಯೆ ನಮ್ಮ ಕೇರಿ ತಲ್ಪುವಂತೆ ಮಾಡಿದರು. ಅಷ್ಟಾದರೂ ನಮ್ಮ ಜನರ ಕೆಚ್ಚು ಕೊಟ್ಟು ಮಿಗುವಷ್ಟು ಇತ್ತು. ಮೇಲ್ಜಾತಿಯವರ ಬಳಿಗೆ ಮೊಣಕಾಲೂರಿ ಜೀ ಎಂದು ಹೋಗಲಿಲ್ಲ. ಬದಲಾಗಿ ನಮ್ಮ ಕೇರಿಗಡಿಯಲ್ಲಿ ಕಲ್ಲು ಹೊತ್ತು ತಂದು ರಾಶಿ ಹಾಕಿದರು. ಸಂದರ್ಭಬಿದ್ದರೆ ಹೆಂಗಸರೂ ಕಲ್ಲು ಬೀರಲು ರೆಡಿಯಾಗಿದ್ದರು. ಬೇಕಾಗಬಹುದು ಅಂತ ಗಂಡಸರು ದನದ ಚರ್ಮ ಸುಲಿಯುವ ಚೂರಿಗಳನ್ನು ಮಸೆದು ಇಟ್ಟಿದ್ದರು. ಇಷ್ಟಕ್ಕಾಗಲೆ ಮಹರರು ಗ್ರಾಮಸ್ಥರ ವಿರುದ್ಧ ಎದುರು ಬಿದ್ದಿರುವರು ಎಂದು ಗುಲ್ಲು ಎದ್ದಿತು. ಚಲನವಲನ ತಿಳಿದು ಗ್ರಾಮಸ್ಥರಿಗೆ ಹಿಂದುಮುಂದಾಗತೊಡಗಿತು. ಆಗ ಗ್ರಾಮಸ್ಥರೆ ಮುಂದೆ ಬಂದು ಒಪ್ಪಂದಕ್ಕೆ ಹೇಳಿ ಕಳಿಸಿದರು. ಒಪ್ಪಂದಕ್ಕಾಗಿ ಒಂದಿಷ್ಟು ಜನ ಕಟ್ಟುಮಸ್ತಾದ ಕಪ್ಪು ಮಯ್ಯ ಮಹರರು ಕೈಯಲ್ಲಿ ಬಿಸಿಲಿಗೆ ಥಳಥಳಿಸುತ್ತಿದ್ದ ಚೂರಿಗಳನ್ನು ಹಿಡಿದು ಉರಿ ಮೊಖದಲ್ಲಿ ಮಾರುತಿ ಗುಡಿ ಎದುರು ನಿಂತರು. ಅಲ್ಲಿದ್ದ ಗ್ರಾಮಸ್ತರಲ್ಲೊಬ್ಬರು "ಯಾರು ನೀವು?" ಎಂದು ಕೇಳಿದರು. ಅದಕ್ಕೆ ಆರಡಿ ಆಜಾನುಬಾಹು ಕಾಶಿರಾಮನು ಅವರನ್ನೆ ಚೊಪುಕಣ್ಣಲ್ಲಿ ತಿವಿದು ನೋಡುತ್ತ "ನಾವ? ದೊರೆಗಳು!" ಎಂದುತ್ತರಿಸಿದನು. ಕಂಡಾಕ್ಷಣ ಕಾಲಿಗೆ ಬೀಳದೆ ಇಂಥ ಎದುರುತ್ತರ ಕೊಡೋ ಉದ್ಧಟ

ರೊಡನೆ ಒಪ್ಪಂದ ಹೇಗೆ ಅಂತ ಗ್ರಾಮಸ್ಥರಿಗೆ ಯೋಚನೆಗಿಟ್ಟುಕೊಂಡಿತು. ಈಗಲೂ ಊರಿಗೆ ಹೋದಾಗ ಜಾವಾಜಿಯು ಕಂಡೇಬರುತ್ತೇನೆ. ಇಂದೂ ಅವನ ತಲೇಲಿ ಆ ಹಳೆ ನೆನಪುಗಳೆಲ್ಲ ಹಸಿರಾಗುಳಿದಿವೆ.

ನನ್ನ ಚಿಕ್ಕಂದಿನ ಎಳೆಗಣ್ಣಲ್ಲಿ ಅಚ್ಚೊತ್ತಿದ್ದ ಅಪ್ಪನ ರೂಪು ಕೆಲವೊಮ್ಮೆ ಕಣ್ಣೆದುರು ಮೂಡುವುದು. ಅಪ್ಪ ಕಪ್ಪಗೆ ತೆಳ್ಳಗೆ ಉದ್ದಕ್ಕೆ ಇದ್ದನು. ಕಪ್ಪು ಮಕಮಲ್ಲಿನ ಟೋಪಿಯನ್ನು ತಲೆಗೇರಿಸದೆ ಹೊರಬರುತ್ತಿರಲಿಲ್ಲ. ಹಾಕೊ ದಿರಿಸು ಸದಾ ಬೆಳ್ಳಗಿರುತ್ತಿತ್ತು. ಅ ಆ ಇ ಈ ಬರದಿದ್ದರೂ ಜೋಬಲ್ಲಿ ಸದಾ ಒಂದು ಫೌಂಟನ್ ಪೆನ್ನು ಹೊರಗಿಣುಕುತ್ತಿತ್ತು. ಅಪ್ಪ ಬಾಂಬೆಯ ಹಡಗುಕಟ್ಟೆಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದನು. ಅಲ್ಲಿ ರಿಟೈರಾದ ಮೇಲೆ ಹಳ್ಳಿಗೆ ಬಂದೆವು. ಅಪ್ಪನಿಗೆ ಕುಡಿಯುವ ಚಟವಿತ್ತು. ಬಂದ ಹಣವೆಲ್ಲ ಹೆಂಡದಂಗಡಿ ದಾರಿ ಹಿಡಿಯುತ್ತಿತ್ತು. ಹಾಗಾಗಿ ಊರು ತಲ್ಪಿದಾಗ ನಮ್ಮಲ್ಲಿ ಚಿಕ್ಕಾಸೂ ಇರಲಿಲ್ಲ. ಊರಲ್ಲಿ ಅವರಿವರ ಹೊಲದಲ್ಲಿ ಕೂಲಿ ಗತಿಯಾಯ್ತು. ಹಾಗಿದ್ದೂ ಅಪ್ಪನಿಗೆ 'ತಮಾಷ' ಹುಚ್ಚಿತ್ತು. ಅದಕ್ಕಾಗಿ ಪಸ್ತೆ ಹೈಕಳನ್ನು ಜೊತೆಗೂಡಿಸಿದ್ದನು. ನಮ್ಮ ಜಾತಿಯವರಿಗಾಗಿ ಒಂದು ಗರಡಿ ಮನೆಯನ್ನು ಆರಂಭಿಸಿದ್ದನು. ಮದುವೆ ಮುಂಜಿಗಳಲ್ಲಿ ಅಪ್ಪನ ಮುಖಂಡತ್ವದಲ್ಲಿ ಸಂಗೀತ ಕಛೇರಿಯೂ ನಡೆಯುತ್ತಿತ್ತು. ಆಗಾಗ ನಾನೂ ಅವರ ಜೊತೆಗೂಡುತ್ತಿದ್ದೆ.

ನಾನು ವಯಸ್ಸಿಗೆ ಕಾಲಿಡುತ್ತಿದ್ದಾಗ ನಮ್ಮ ಜಾತಿಯ ಮುಖಂಡರು ತೀರಿಕೊಂಡರು. ಅಪ್ಪನ ಕುಡಿತ ಮಿತಿಮೀರಿ ಹೆಚ್ಚಿತು. ಹಾಗಾಗಿ ಒಂದು ದಿನ ಅವನ ಪಿತ್ತಕೋಶ ಒಡೆದು ಅವನೂ ತೀರಿಕೊಂಡನು. ನನಗೆ, ಅವ್ವಗೆ ದಿಕ್ಕುದೆಸೆ ಇಲ್ಲದಂತಾಯ್ತು. ಅವ್ವ ಜೀವನ ಎಳೆಯಲು ಅದು ಇದು ಎನ್ನದೆ ಸಿಕ್ಕಿದ ಕೆಲ್ಸ ಮಾಡಿ ನಿಭಾಯಿಸತೊಡಗಿದಳು. ಇಷ್ಟರ ನಡುವೆ ನನ್ನ ಮಿಡ್ಲುಸ್ಕೂಲು ಓದು ಮುಗಿಯಿತು. ಮುಂದೆ ಓದಲು ತಾಲೂಕಿಗೆ ಹೋಗಬೇಕಿತ್ತು. ಅವ್ವ ತನ್ನ ಕಷ್ಟಗಳನ್ನೆಲ್ಲ ನುಂಗಿಕೊಂಡು ಮುಂದೆ ಓದಿಸಲು ಮನಸ್ಸು ಮಾಡಿದಳು. ಇದು ಅಂದರೆ ಗಂಡಸತ್ತ ಮುಂಡೆಮಗ ಅದೂ ಮಹರ್. ಮುಂದೆ ಓದುವುದು ಗ್ರಾಮಸ್ಥರಿಗೆ ಸರಿಕಾಣಲಿಲ್ಲ. "ಹಾರುವರ ಮಕ್ಕಳ ಥರ ನಿನ್ನ ಮಗನು ಓದೋದು ಸರಿಬೀಳುವುದಿಲ್ಲ" ಎಂದೆಲ್ಲ ಹೇಳಿದರು. ನಾನು ದನ ಕಾಯ್ದುಕೊಂಡು ಮನೆಗೆಲಸ ಮಾಡುವುದೆ ಹೆಚ್ಚು ಪ್ರಯೋಜನವೆಂದೆಣಿಸಿದ್ದರು. ಈ ಎಲ್ಲ ಕಿವಿಮಾತಿಗೆ ಅವ್ವ ಸೊಪ್ಪು ಹಾಕಲಿಲ್ಲ. ಅವಳಿಗೆ ನಾನು ಅವಳ ಬದುಕನ್ನು ಮುಂದುವರಿಸುವುದು ಬೇಡವಿತ್ತು. ಅವಳಿಗೆ ಈ ಬುದ್ಧಿಯನ್ನು ಕೊಟ್ಟವರು ಯಾರು? ಅವ್ವಗೆ ಇಂಥ ಎದೆಗಾರಿಕೆ ಇಲ್ಲದಿದ್ದರೆ ಈಗ ನಾನೆಲ್ಲಿ ಇರುತ್ತಿದ್ದೆ ?

ನನ್ನ ಮುಂದಿನ ತಾಲೂಕು ಸ್ಕೂಲಿನ ದಿನಗಳಲ್ಲಿ ಜಾತಿಭೇದವನ್ನು ಉಣ್ಣಬೇಕಾಗಿತ್ತು. ಆವಾಗ್ಲೂ ನನ್ನ ದೈನ್ಯವನ್ನೆಲ್ಲ ಅದುಮಿಟ್ಟು ಚರ್ಚೆ ನಾಟಕ ಓದು ಎಲ್ಲದರಲ್ಲು ಮುಂದಿದ್ದೆ. ಮೇಸ್ತರು ಕ್ಲಾಸಲ್ಲಿ "ಮಹರ್ ಆಗಿದ್ದರೂ ಚೊಟಿ ಹುಡುಗ, ಪ್ರತಿಭಾವಂತ" ಎಂದೆಲ್ಲ ಹೊಗಳಿದ್ದರು. ಆದರೆ ಊಟದ ಹೊತ್ತು ಬಂದಾಗ ಜಾತಿ ಬಂದು ವಿಂಗಡಿಸಿ ಕೂರಿಸುತ್ತಿತ್ತು. ಇದು ಸದಾ ನನ್ನನ್ನು ತಿನ್ನುತ್ತಿತ್ತು. ಬೇರೆಯವರು ತಮ್ಮ ತಿಂಡಿ ತೀರ್ಥ ನನಗೆ ಕೊಡುತ್ತಿದ್ದರು. ಆದರೆ ನನ್ನದನ್ನು ಮುಟ್ಟುತ್ತಿರಲಿಲ್ಲ. ಹೊಳೇಲಿ ನೀರು ಕುಡಿಯುವಾಗಲೂ ಅವರು ಮೇಲ್ದಂಡೇಲಿ ಕುಡಿದರೆ ಅವರ ಇಂಗಿತದಂತೆ ನಾನು ಕೆಳದಂಡೇಲಿ ಕುಡಿಯುವುದು ನನ್ನ ರೂಢಿಯೊಳಗೇ ಸೇರಿಬಿಟ್ಟಿತ್ತು.

ಈ ದುಃಖದ ಸಾಗರದಲ್ಲಿ ಮುಳುಗಿದ್ದ ನನ್ನನ್ನು ಕಿರಿಮಗಳು ಬಂದು ಎಚ್ಚೆರಿಸಿದಳು. ಅವರ ಮೇಷ್ಟ್ರು ಸಂತ ರಾಮದಾಸರ 'ಮನಶೆ ಶ್ಲೋಕ'ದ ಪುಸ್ತಕ ಕೊಳ್ಳಲು ವಿಧಿಸಿರುವುದನ್ನು ಹೇಳಿದಳು. ಇದಕೇಳಿ ಮತ್ತೂ ನನಗೆ ಹೊಟ್ಟೆ ತೊಳಿಸತೊಡಗಿತು. ಸಂತ ರಾಮದಾಸರ ಶ್ಲೋಕವೊಂದು ಹೀಗಿದೆ:

ಮುಟ್ಟು ಮಾಂಸ ಕಲ್ಮಶದೊಳಗಿಂದಲಿ
ಜನಿಸಿದ ಮನುಜನು
ಹೇಗೆ ತಾನೆ ತಾ ಪರಿಶುದ್ಧನು?
ಮನುಜನ ಹಿರಿಮೆಯು ತೊಲಗುವ ಕಂಡ್ಕ
ಒಳ ಕೆಳಗೇನಿದೆ?
ಬರೆ ಕೊಳೆ ಅದುವೆ ಮಾಂಸದ ಮುದ್ದೆ.

ಈ ಶ್ಲೋಕ ಮಾನವನ ಬದುಕನ್ನು ಎಷ್ಟು ಕೀಳಾಗಿಸಿದೆ! ಶಾಲೆ ಕಾಲೇಜುಗಳಲ್ಲಿ ಏನೆಲ್ಲ ಕಲಿಸುತ್ತಿರುವರು! ಕೀಳು ಭೇದಭಾವನೆಯ ಬೆಂಕಿಯು ನನ್ನನ್ನು ಹುಟ್ಟಿದಾರಭ್ಯ ದಹಿಸುತ್ತ ಬಂದಿದೆ. ನನ್ನ ಅಜ್ಜಮುತ್ತಜ್ಜರು— ಇದೇ ಸ್ಥಿತಿಯನ್ನು ಮುಂದುವರಿಸಬೇಕಾಗಿದೆ. ಮನುಷ್ಯರನ್ನು ಕೀಳಾಗಿಸುವ ವಿಂಗಡಿಸುವ ಅಮಾನುಷ ಧರ್ಮಗ್ರಂಥಗಳನ್ನು ಮೊದಲು ಬೆಂಕಿಗಿಡಬೇಕು. ●